

بسم اللهِ الرّحمٰنِ الرّحيم

# ಹಝ್ರತ್ ಉಸ್ಮಾನ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26-02-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್(ರ)ರ ಕಾಲದ ಯುದ್ಧಗಳ ಮತ್ತು ವಿಜಯಗಳ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದನ್ನೇ ಮುಂದುವರಿಸುತ್ತೇನೆ. ಅಲಿ ಬಿನ್ ಮುಹಮ್ಮದ್ ಮದಾಯನಿ ವರದಿ ಮಾಡುತ್ತಾರೆ: ಹಿಜರೀ 30ರಲ್ಲಿ ಹಝ್ರತ್ ಉಸ್ಮಾನ್(ರ)ರ ಕಾಲಘಟ್ಟದಲ್ಲಿ ಹಝ್ರತ್ ಸಈದ್ ಬಿನ್ ಆಸ್(ರ) ತಬರೀಸ್ತಾನದ ಕೋಟೆಯ ಮೇಲೆ ವಿಜಯ ಸಾಧಿಸಿದರು. ಅದೇ ರೀತಿ ಹಿಜರೀ 31ರಲ್ಲಿ ಸುವಾರಿ ಮೇಲೆ ವಿಜಯ ಸಾಧಿಸಲಾಯಿತು. ಆರ್ಮೀನದ ವಿಜಯ ಹಿಜರಿ 31ರಲ್ಲಿ ಆಯಿತು. ಖುರಾಸಾನ್ ವಿಜಯ ಹಿಜರೀ 31ರಲ್ಲಿ ಉಂಟಾಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಆಮಿರ್ ಖುರಾಸಾನ್ ಕಡೆಗೆ ರವಾನೆಯಾದರು. ಅವರು ಅಬ್ರಹ, ತೂಸ್ ಪಟ್ಟಣ, ಅಬೀ ವರ್ದ್ ಮತ್ತು ನಸಾಹ್ ಮೇಲೆ ವಿಜಯ ಸಾಧಿಸುತ್ತಾ ಸರ್‌ಖಸ್ ತಲುಪಿದರು. ಹಿಜರೀ 32 ರೋಮ್ ನಗರದ ಕಡೆಗೆ ಮುಂದುವರಿಕೆ ನಡೆಯಿತು. ಹಿಜರೀ 32ರಲ್ಲಿ ಅಮೀರ್ ಮುಆವಿಯಾ ರೋಮ್ ನಗರದ ವಿರುದ್ಧ ಯುದ್ಧ ನಡೆಸುತ್ತಾ ಇಸ್ತಂಬೂಲಿನ ಪ್ರವೇಶದ್ವಾರದ ತನಕ ತಲುಪಿದರು.

ಅಬುಲ್‌ಅಶ್‌ಬ್ ಸಅದಿ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಮರೂರೋಝ್, ತಾಲೀಖಾನ್, ಫಾರ್‌ಯಾಬ್ ಮತ್ತು ಜೂಝ್ಜಾನ್‌ರ ನಿವಾಸಿಗಳೊಂದಿಗೆ ಅಹ್‌ನಬ್ ಬಿನ್ ಖೈಸ್ ರಾತ್ರಿಯ ಅಂಧಕಾರ ಕವಿಯುವ ತನಕ ಯುದ್ಧ ನಡೆಸಿದರು. ಹೀಗೆ ಅಲ್ಲಾಹನು ಶತ್ರುಗಳನ್ನು ಪರಾಜಯಗೊಳಿಸಿ ನಾಶಪಡಿಸಿದನು. ಹಿಜರೀ 32ರಲ್ಲಿ ಬಲಖ್‌ನ ಮೇಲೆ ವಿಜಯ ಸಾಧಿಸಲಾಯಿತು. ಮರೂರೋಝ್‌ನಿಂದ ಬಲಖ್‌ನ ಕಡೆಗೆ ಅಹ್‌ನಬ್ ಬಿನ್ ಖೈಸ್ ಹೋದರು. ಅಲ್ಲಿಗೆ ಹೋಗಿ ಬಲಖ್‌ನ ನಿವಾಸಿಗಳನ್ನು ಸುತ್ತುವರೆದರು. ಹರಾತ್‌ನ ಕಾರ್ಯಸಾಧನೆ ಹಿಜರೀ 32ರಲ್ಲಿ ನಡೆದಿತ್ತು. ಖಲೀದ್ ಬಿನ್ ಅಬ್ದುಲ್ಲಾಹ್ ಬಿನ್ ಹನ್‌ಫಿಯನ್ನು ಹಝ್ರತ್ ಉಸ್ಮಾನ್(ರ) ಹರಾತ್ ಮತ್ತು ಬಾಝ್‌ಗೈಸ್‌ನ ಕಡೆಗೆ ರವಾನೆ ಮಾಡಿದರು. ಅವರು ಅವೆರಡರ ಮೇಲೆ ವಿಜಯ ಸಾಧಿಸಿದರು.

ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ಭಾರತ – ಪಾಕಿಸ್ತಾನದ ಉಪಭೂಖಂಡಕ್ಕೆ ಇಸ್ಲಾಮ್ ಧರ್ಮ ತಲುಪಿತು. ಹಝ್ರತ್ ಉಮರ್(ರ)ರ ಕಾಲದಲ್ಲಿ ಇಜಿಪ್ಟ್ ಮತ್ತು ಸಿರಿಯದ ಮೇಲೆ ವಿಜಯ ಸಾಧಿಸಲಾಗಿತ್ತು. ಆಫ್ರಿಕ, ಖುರಾಸಾನ್ ಮತ್ತು ಸಿಂಧ್‌ನ ಕೆಲವು ಪ್ರದೇಶದ ಮೇಲೆ ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ವಿಜಯ ಸಾಧಿಸಲಾಯಿತು. ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಮುಅಮ್ಮರ್‌ರಿಗೆ ಸೈನ್ಯದ ಒಂದು ತುಕಡಿಯನ್ನು ಕೊಟ್ಟು ಮಕ್‌ರಾನ್ ಮತ್ತು ಸಿಂಧ್‌ನ ಕಡೆಗೆ ಕಳುಹಿಸಲಾಯಿತು. ಮಕ್‌ರಾನಿನ ಮೇಲಿನ ವಿಜಯ ಸಾಧನೆಯಲ್ಲಿ ಅವರು ಬಹಳವಾಗಿ ಶೌರ್ಯದ ಕೌಶಲವನ್ನು ತೋರಿಸಿದರು. ಅನಂತರ ವಿಜಯ ಸಾಧಿಸಲಾದ ಸುತ್ತುಮುತ್ತಲಿನ ಆ ಪ್ರದೇಶಗಳ ನೇತೃತ್ವವನ್ನು ಅವರಿಗೆ ಒಪ್ಪಿಸಲಾಯಿತು. ಈಗಿನ ಅಫ್ಘಾನಿಸ್ತಾನದ ರಾಜಧಾನಿಯಾದ ಕಾಬೂಲ್‌ನಲ್ಲಿ ಇಸ್ಲಾಮಿನ ಸೈನ್ಯದ ಒಂದು ತುಕಡಿಯ ನೇತೃತ್ವವನ್ನು ವಹಿಸುತ್ತಾ ಹಝ್ರತ್ ಮುಜಾಶಿಅ ಇಸ್ಲಾಮಿನ ಶತ್ರುಗಳ ವಿರುದ್ಧ ಧರ್ಮಯುದ್ಧ ಮಾಡಿದರು. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ, ಹಝ್ರತ್ ಮುಜಾಶಿಅ ಪಾಕಿಸ್ತಾನದ ರಾಜ್ಯವಾದ ಬಲೋಚಿಸ್ತಾನದಲ್ಲಿ ಇಸ್ಲಾಮಿನ ಎದುರಾಳಿಗಳ ವಿರುದ್ಧ ಯುದ್ಧ ನಡೆಸಿದರು. ಅದಕ್ಕೆ ಸೇರಿಕೊಂಡಿರುವ ಪ್ರದೇಶವಾದ ಸಜಿಸ್ತಾನದಲ್ಲಿ ಧ್ವಜಾರೋಹಣ ನಡೆಸಿದರು. ಅನಂತರ ಮುಸ್ಲಿಮರು ಉಪಭೂಖಂಡದ ಆ ಪ್ರದೇಶಗಳಲ್ಲಿ ನೆಲೆಸಿದರು ಮತ್ತು ಅವುಗಳನ್ನು ತಮ್ಮ ಸ್ವದೇಶವನ್ನಾಗಿ ಮಾಡಿದರು.

ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಡೆದ ಫಿತ್ನದ ಕುರಿತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳು ಸಹ ಇವೆ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹೇ ಉಸ್ಮಾನ್, ಅಲ್ಲಾಹನು ನಿನಗೆ ಒಂದು ನಿಲುವಂಗಿಯನ್ನು ತೊಡಿಸುವನು. ಜನರು ಆ ನಿಲುವಂಗಿಯನ್ನು ಕಳಚಲು ಬೇಡಿದರೆ, ಅವರ ಹೇಳಿಕೆ ಪ್ರಕಾರ ನೀನು ಎಂದಿಗೂ ಅದನ್ನು ಕಳಚಬೇಡ.

ಹಝ್ರತ್ ಕಅ್‌ಬ್ ಬಿನ್ ಅಜ್‌ರಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಸಮೀಪದಲ್ಲೇ ಬರಲಿರುವ ಒಂದು ಫಿತ್ನದ ಬಗ್ಗೆ ಪ್ರಸ್ತಾಪಿಸಿದರು. ಅಷ್ಟರಲ್ಲಿ ತಲೆ ಮುಚ್ಚಿಕೊಂಡು ಒಬ್ಬ ವ್ಯಕ್ತಿ ಅಲ್ಲಿಂದ ದಾಟಿಹೋದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ವ್ಯಕ್ತಿ ಆ ದಿನ ಸನ್ಮಾರ್ಗದಲ್ಲಿ ಆಗಿರುವರು. ವರದಿಗಾರ ಹೇಳುತ್ತಾರೆ: ನಾನು ರಭಸದಿಂದ ಜಿಗಿದುಕೊಂಡು ಆ ವ್ಯಕ್ತಿಯನ್ನು ಹಿಡಿದೆ. ಅವರು ಹಝ್ರತ್ ಉಸ್ಮಾನ್(ರ) ಆಗಿದ್ದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ರೋಗಾವಸ್ಥೆಯಲ್ಲಿದ್ದಾಗ ಹೇಳಿದರು – ನನ್ನ ಸಮೀಪ ಕೆಲವು ಸಹಾಬಿಯರು ಇರಬೇಕೆಂದು ನಾನು ಬಯಸುತ್ತೇನೆ. ನಾವು ಕೇಳಿದೆವು: ಯಾ ರಸೂಲಲ್ಲಾಹ್, ನಾವು ನಿಮ್ಮ ಸನ್ನಿಧಿಗೆ ಹಝ್ರತ್ ಅಬೂಬಕರ್‌ರನ್ನು ಕರೆಯಲೇ? ಹಝ್ರತ್ ಪೈಗಂಬರ್(ಸ) ಮೌನವಾಗಿದ್ದರು. ಅನಂತರ ನಾವು ಕೇಳಿದೆವು: ನಿಮ್ಮ ಬಳಿಗೆ ಹಝ್ರತ್ ಉಮರ್‌ರನ್ನು ಕರೆಯಲೇ? ಆಗಲೂ ಹಝ್ರತ್ ಪೈಗಂಬರ್(ಸ) ಸುಮ್ಮನಿದ್ದರು. ನಿಮ್ಮ ಬಳಿಗೆ ಹಝ್ರತ್ ಉಸ್ಮಾನ್‌ರನ್ನು ಕರೆಯಲೇ? ಎಂದು ನಾವು ಕೇಳಿದೆವು. ಸರಿಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಉಸ್ಮಾನ್(ರ) ಬಂದು ಹಝ್ರತ್ ಪೈಗಂಬರ್(ಸ)ರನ್ನು ಏಕಾಂತದಲ್ಲಿ ಭೇಟಿಯಾದರು. ಹಝ್ರತ್ ಪೈಗಂಬರ್(ಸ) ಅವರೊಡನೆ ಮಾತನಾಡಲು ಶುರುಮಾಡಿದರು. ಹಝ್ರತ್ ಉಸ್ಮಾನ್‌ರ ಮುಖದ ಬಣ್ಣ ಬದಲಾಗುತ್ತಿತ್ತು. ಖೈಸ್ ಹೇಳುತ್ತಾರೆ:

ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಯೌಮುದ್ದಾರ್‌ನ ವೇಳೆ ಹೇಳಿದರು: ಹಝ್ರತ್ ಪೈಗಂಬರ್(ಸ) ನನ್ನೊಡನೆ ಒಂದು ತಾಕೀತು ಮಾಡಿದ್ದರು. ನಾನು ಅದರ ಕಡೆಗೆ ಹೋಗುತ್ತಿರುವೆನು. **ಅನ ಸಾಬಿರುನ್ ಅಲೈಹಿ.** ನಾನು ಅದರ ಮೇಲೆ ಸುದೃಢವಾಗಿ ನೆಲೆನಿಂತಿರುವೆನು. ಹಝ್ರತ್ ಉಸ್ಮಾನ್‌ರನ್ನು ಅವರ ಮನೆಯಲ್ಲೇ ಕಪಟವಿಶ್ವಾಸಿಗಳು ಸುತ್ತುವರೆದ ನಂತರ ಅವರನ್ನು ನಿರ್ದಯವಾಗಿ ಶಹೀದ್ ಮಾಡಿದ್ದ ದಿನವನ್ನು ಯೌಮುದ್ದಾರ್ ಎಂದು ಹೇಳಲಾಗುತ್ತದೆ.

ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ತಲೆಯೆತ್ತಿದ ಭಿನ್ನತೆ ಮತ್ತು ಅದರ ಕಾರಣಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮಹಾನುಭಾವರಾದ ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿ(ರ) ಇಬ್ಬರೂ ಇಸ್ಲಾಮಿನ ತ್ಯಾಗಿಗಳಲ್ಲಿ ಮೊದಲಿಗರಾಗಿದ್ದರು. ಅವರ ಸಂಗಡಿಗರು ಸಹ ಇಸ್ಲಾಮಿನ ಅತ್ಯುತ್ತಮ ಫಲಗಳಾಗಿರುವರು. ಅವರ ಪ್ರಾಮಾಣಿಕತೆ ಮತ್ತು ದೇವಭಕ್ತಿಯ ಬಗ್ಗೆ ಆರೋಪ ಹೊರಿಸುವುದು ಯಥಾರ್ಥದಲ್ಲಿ ಇಸ್ಲಾಮಿನ ಮೇಲೆ ನ್ಯೂನತೆ ಹೊರಿಸುವುದಕ್ಕೆ ಸಮವಾಗಿದೆ. ಮುಸ್ಲಿಮರಲ್ಲಿ ಯಾರೇ ಆಗಲಿ, ಶುದ್ಧ ಮನಸ್ಸಿನೊಂದಿಗೆ ಈ ಸತ್ಯತೆಯ ಬಗ್ಗೆ ಯೋಚಿಸುವುದಾದರೆ, ಆ ಮಹಾನುಭಾವರು ಸತ್ಯದಲ್ಲಿ ಎಲ್ಲ ರೀತಿಯ ಪಕ್ಷಪಾತದಿಂದ ಬಹಳ ದೂರವಿದ್ದರು ಎಂದು ಕಂಡುಕೊಳ್ಳುವರು. ನನ್ನ ಅನ್ವೇಷಣೆ ಪ್ರಕಾರ, ಈ ಮಹಾನುಭಾವರ ಮತ್ತು ಅವರ ಸಂಗಡಿಗರ ಕುರಿತು ಹೇಳಲಾಗುವ ಎಲ್ಲ ಸಂಗತಿಗಳು ಇಸ್ಲಾಮಿನ ಶತ್ರುಗಳ ಕೆಲಸಗಳಾಗಿವೆ. ಪಿತೂರಿ ಎಲ್ಲಿಂದ ಉದ್ಭವಿಸಿತ್ತು ಎಂಬುದಾಗಿದೆ ಪ್ರಶ್ನೆ. ಹಝ್ರತ್ ಉಸ್ಮಾನ್(ರ) ಕೆಲವು ನವೀನಾಚಾರಗಳನ್ನು ಶುರುಮಾಡಿದ್ದರ ಕಾರಣದಿಂದ ಮುಸ್ಲಿಮರು ಕುಪಿತರಾಗಿದ್ದರು ಎಂದು ಕೆಲವರು ಹೇಳುತ್ತಾರೆ. ಹಝ್ರತ್ ಅಲಿ(ರ) ಸ್ವತಃ ಖಲೀಫರಾಗಲು ರಹಸ್ಯವಾದ ಪ್ರಯತ್ನವನ್ನು ಶುರುಮಾಡಿದ್ದರು ಮತ್ತು ಹಝ್ರತ್ ಉಸ್ಮಾನ್(ರ)ರ ಎದುರಿಗೆ ವಿರೋಧವನ್ನು ಸೃಷ್ಟಿಸಿ ಅವರನ್ನು ಕೊಲೆ ಮಾಡಿಸಿದ್ದರು ಎಂದೂ ಕೆಲವರು ಹೇಳುತ್ತಾರೆ. ಆದರೆ ಈ ಎರಡೂ ಸಂಗತಿಗಳು ತಪ್ಪಾಗಿವೆ. ಈ ಫಿತ್ನದ ಕಾರಣಗಳು ಬೇರೆಯೇ ಆಗಿದ್ದುವು. ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿ(ರ) ಈ ರೀತಿಯ ಆರೋಪಗಳಿಂದ ಸಂಪೂರ್ಣವಾಗಿ ಮುಕ್ತರಾಗಿದ್ದರು. ಅವರು ಅತ್ಯಂತ ಪರಿಶುದ್ಧ ವ್ಯಕ್ತಿಗಳಾಗಿದ್ದರು. ಹಝ್ರತ್ ಉಸ್ಮಾನ್‌ರ ಖಿಲಾಫತಿನ ಆರಂಭಿಕ ಆರು ವರ್ಷಗಳಲ್ಲಿ ಯಾವುದೇ ಪಿತೂರಿಯನ್ನು ನಮಗೆ ಕಾಣಲು ಸಿಗುವುದಿಲ್ಲ. ಬದಲಿಗೆ ಸಾಮಾನ್ಯವಾಗಿ ಜನರು ಅವರಿಂದ ಸಂತುಷ್ಟರಾಗಿದ್ದರು ಎಂದು ಗೊತ್ತಾಗುತ್ತದೆ. ಆದರೆ ಆರು ವರ್ಷಗಳ ನಂತರ, ಏಳನೇ ವರ್ಷದಲ್ಲಿ ನಾವು ಒಂದು ಕುತಂತ್ರವನ್ನು ಕಾಣುತ್ತೇವೆ. ಆ ಷಡ್ಯಂತ್ರ ಹಝ್ರತ್ ಉಸ್ಮಾನ್(ರ)ರ ವಿರುದ್ಧವಾಗಿರಲಿಲ್ಲ. ಬದಲಾಗಿ ಅದು ಸಹಾಬರ ವಿರುದ್ಧ ಅಥವಾ ಕೆಲವು ಅಧಿಕಾರಿಗಳ ವಿರುದ್ಧವಾಗಿತ್ತು. ಈ ಬಗ್ಗೆ ತಬರಿ ಹೇಳುತ್ತಾರೆ: ಜನರ ಹಕ್ಕುಗಳ ಬಗ್ಗೆ ಹಝ್ರತ್ ಉಸ್ಮಾನ್(ರ) ಪೂರ್ಣವಾಗಿ ಕಾಳಜಿ ವಹಿಸುತ್ತಿದ್ದರು. ಆದರೆ ಇಸ್ಲಾಮಿನ ಮೊದಲಿಗರಲ್ಲದ ಮತ್ತು ಹಳೆಯವರಲ್ಲದ ಜನರಿಗೆ ಮೊದಲಿಗರ ಮತ್ತು ಹಳೆಯ ಮುಸ್ಲಿಮರಿಗೆ ಸಿಗುವಂತಹ ರೀತಿಯಲ್ಲಿ ಸಭೆಗಳಲ್ಲಿ ಗೌರವ ಸಿಗುತ್ತಿರಲಿಲ್ಲ, ಅಧಿಕಾರದಲ್ಲಿ ಅವರಿಗೆ ಸಮವಾದ ಪಾಲು ಸಿಗುತ್ತಿರಲಿಲ್ಲ ಮತ್ತು ಸಂಪತ್ತಿನಲ್ಲಿ ಸಮವಾದ ಹಕ್ಕುಗಳು ಸಿಗುತ್ತಿರಲಿಲ್ಲ. ಆಗ ಕೆಲವು ಕಾಲದ ನಂತರ ಕೆಲವು ಜನರು ಸಂಪತ್ತಿನ ವಿಶದ ವಿವರಗಳು ಅರಿಯಬೇಕೆಂದು ಒತ್ತಾಯ ಪಡಿಸಿದರು ಮತ್ತು ಸಮಾನ ರೀತಿಯಲ್ಲದ ಹಂಚಿಕೆಯನ್ನು ದೌರ್ಜನ್ಯವೆಂದು ಹೇಳಲು ಶುರುಮಾಡಿದರು. ಆದರೆ ಈ ಜನರು ಸಾಮಾನ್ಯ ಮುಸ್ಲಿಮರಿಗೆ ಹೆದರುತ್ತಲೂ ಇದ್ದರು. ಜನರು ವಿರೋಧಿಸುವರು ಎಂಬ ಭಯದಿಂದ ಅವರು ತಮ್ಮ ಅನಿಸಿಕೆಗಳನ್ನು ಜನರ ಮುಂದೆ ಪ್ರಕಟಿಸುತ್ತಿರಲಿಲ್ಲ. ಬದಲಿಗೆ ಅವರು ರಹಸ್ಯವಾಗಿ ಸಹಾಬರ ವಿರುದ್ಧ ಜನರೆಡೆಯಲ್ಲಿ ಆವೇಶ ಉಂಟಾಗುವಂತೆ ಮಾಡುತ್ತಿದ್ದರು. ನಿಧಾನವಾಗಿ ಇವರ ಸಂಖ್ಯೆ ಹೆಚ್ಚಾಗುತ್ತಿತ್ತು ಮತ್ತು ಅವರು ಹಿರಿದಾದ ಒಂದು ಗುಂಪಾದರು.

ಈ ಎಲ್ಲ ಪಿತೂರಿಗಳು ರಹಸ್ಯವಾದ ಯೋಜನೆಯ ಕಾರಣದಿಂದಾಗಿತ್ತು. ಇದರ ಯಥಾರ್ಥ ಕಾರಣೀಭೂತರು ಯಹೂದಿಯರಾಗಿದ್ದರು. ಅವರೊಂದಿಗೆ ಧರ್ಮಭ್ರಷ್ಟರಾಗಿದ್ದ ಮತ್ತು ಭೌತಿಕ ಲಾಲಸೆಯಲ್ಲಿ ಮುಳುಗಿದ್ದ ಕೆಲವು ಮುಸ್ಲಿಮರು ಸೇರಿದ್ದರು. ಹೀಗೆ ಕೂಫದಲ್ಲಿ ಈ ಗಲಭೆಗಾರರು ಒಂದು ಸಭೆ ನಡೆಸಿದರು. ಹಝ್ರತ್ ಉಸ್ಮಾನ್(ರ)ರ ಆಡಳಿತವಿರುವ ತನಕ ಯಾರಿಗೂ ತಲೆಯೆತ್ತಲು ಸಾಧ್ಯವಲ್ಲವೆಂದು ಆ ಸಭೆಯಲ್ಲಿದ್ದ ಎಲ್ಲರೂ ಒಮ್ಮತಾಭಿಪ್ರಾಯದಿಂದ ಹೇಳಿದರು. ಹಝ್ರತ್ ಉಸ್ಮಾನ್(ರ) ಇರುವುದರಿಂದ ಕುಕೃತ್ಯಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ತಮ್ಮ ಉದ್ದೇಶಗಳನ್ನು ಈಡೇರಿಸಲು ಹಝ್ರತ್ ಉಸ್ಮಾನ್(ರ)ರನ್ನು ಮಧ್ಯದಿಂದ ತೊಡೆದುಹಾಕುವುದು ಆವಶ್ಯಕವಾಗಿತ್ತು. ಹಝ್ರತ್ ಉಸ್ಮಾನ್(ರ) ಈ ಗಲಭೆಗಾರರನ್ನು ಸಹ ಕರೆದರು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರನ್ನು ಸಹ ಒಟ್ಟುಸೇರಿಸಿದರು. ಗಲಭೆಗಾರರು ಎಂತಹ ಪಿತೂರಿಯನ್ನು ಹರಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರ ಅವಸ್ಥೆಯ ಬಗ್ಗೆ ಅವರೊಡನೆಯೇ ಹೇಳಿದರು. ಆಗ ಗಲಭೆಕೋರರನ್ನು ಕೊಂದುಬಿಡಬೇಕೆಂದು ಎಲ್ಲ ಸಹಾಬರು ಫತ್ವಾ ನೀಡಿದರು. ಏಕೆಂದರೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: "ಒಬ್ಬ ಇಮಾಂ ಇರುವಾಗ ಯಾರಾದರೂ ತನ್ನನ್ನು ಅನುಸರಿಸಲು ಅಥವಾ ಬೇರೆ ಯಾರನ್ನಾದರೂ ಅನುಸರಿಸಲು ಜನರನ್ನು ಕರೆದರೆ ಅವನ ಮೇಲೆ ಅಲ್ಲಾಹನ ಶಾಪವಿದೆ ಮತ್ತು ಅವನು ಯಾರೇ ಆದರೂ ಅವನನ್ನು ಕೊಲ್ಲಬೇಕು." ಸಹಾಬರ ತೀರ್ಪನ್ನು ಕೇಳಿಕೊಂಡು ಹಝ್ರತ್ ಉಸ್ಮಾನ್(ರ) ಹೇಳಿದರು: ಇಲ್ಲ, ನಾವು ಅವರನ್ನು ಕ್ಷಮಿಸುತ್ತೇವೆ, ಅವರ ಬೇಡಿಕೆಗಳನ್ನು ಅಂಗೀಕರಿಸುವೆವು, ನಮ್ಮೆಲ್ಲ ಪ್ರಯತ್ನಗಳ ಮೂಲಕ ಅವರನ್ನು ಮನವರಿಕೆ ಮಾಡಿಸುವೆವು ಮತ್ತು ಅವರು ಶರೀಅತ್ತಿನ ಯಾವುದಾದರೂ ಮಿತಿಯನ್ನು ಮುರಿಯುವ ತನಕ ಅಥವಾ ಸತ್ಯನಿಷೇಧಿಗಳಾಗುವ ತನಕ ಅವರನ್ನು ವಿರೋಧಿಸುವುದಿಲ್ಲ.

ಹಝ್ರತ್ ಉಸ್ಮಾನ್(ರ) ಸಹಾಬರೊಡನೆ ಹೇಳಿದರು: ಹಝ್ರತ್ ಪೈಗಂಬರ್(ಸ) ಯಾತ್ರೆಯ ವೇಳೆ ನಮಾಝ್ ಕಸ್ರ್ ಮಾಡುತ್ತಿದ್ದರೆಂದೂ ಆದರೆ ನಾನು ಯಾತ್ರೆಯಲ್ಲಿ ಪೂರ್ತಿ ನಮಾಝನ್ನು ನಿರ್ವಹಿಸಿದ್ದೆ ಎಂದೂ ಈ ಜನರು ಹೇಳುತ್ತಾರೆ.

ಆದರೆ ನಾನು ಮಿನಾದಲ್ಲಿ ಮಾತ್ರವೇ ನಮಾಝುನ್ನು ಪೂರ್ತಿಯಾಗಿ ನಿರ್ವಹಿಸಿದ್ದೆ. ಅದಕ್ಕೆ ಎರಡು ಕಾರಣಗಳಿವೆ. ಒಂದು, ಅಲ್ಲಿ ನನಗೆ ಸೊತ್ತಿದೆ ಮತ್ತು ನಾನು ಅಲ್ಲಿ ವಿವಾಹ ಮಾಡಿದ್ದೆ. ಎರಡು, ಆ ದಿನಗಳಲ್ಲಿ ಹಜ್ಜ್‌ಗಾಗಿ ನಾಲ್ಕೂ ಕಡೆಯಿಂದ ಜನರು ಬಂದಿದ್ದರು ಎಂದು ನನಗೆ ಗೊತ್ತಿತ್ತು. ಖಲೀಫರು ಎರಡು ರಕಅತ್ ನಮಾಝ್ ನಿರ್ವಹಿಸುತ್ತಾರೆ, ಆದ್ದರಿಂದ ನಮಾಝ್ ಎರಡು ರಕಅತ್‌ಗಳೇ ಆಗಿರಬಹುದು ಎಂದು ಅರಿವಿಲ್ಲದವರು ಹೇಳಬಹುದಾಗಿತ್ತು. ಆದ್ದರಿಂದ ನಾಲ್ಕು ರಕಅತ್ ಪೂರ್ತಿಯಾಗಿ ನಿರ್ವಹಿಸಿದ್ದೆ. ಇದು ಸರಿಯಲ್ಲವೇ? ಹೌದೆಂದು ಸಹಾಬಿಯರು ಹೇಳಿದರು. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ಅವರು ನನ್ನ ಮೇಲೆ ಹೊರಿಸುವ ಎರಡನೇ ಆಪಾದನೆ ಏನೆಂದರೆ, ನಾನು ಯಾರಿಗೂ ಸೇರದ ಭೂಮಿಯನ್ನು ಸರ್ಕಾರದ ಭೂಮಿಯನ್ನಾಗಿ ಮಾಡುವ ನವೀನಾಚಾರವನ್ನು ಶುರುಮಾಡಿದ್ದೇನೆ ಎಂದಾಗಿದೆ. ಆದರೆ ಈ ಆರೋಪ ತಪ್ಪಾಗಿದೆ. ಈ ರೀತಿ ನನಗಿಂತ ಮುಂಚೆಯೇ ಶುರುಮಾಡಲಾಗಿತ್ತು. ಹಝ್ರತ್ ಉಮರ್(ರ) ಇದನ್ನು ಶುರುಮಾಡಿದ್ದರು. ಸದಖದ ಒಂಟೆಗಳು ವರ್ಧಿಸಿದಾಗ, ನಾನು ಆ ರೀತಿಯನ್ನು ಇನ್ನೂ ಹೆಚ್ಚಿಸಿದೆ ಅಷ್ಟೆ. ಅದಕ್ಕೆ ಉಪಯೋಗಿಸುವ ಭೂಮಿ ಯಾರ ಸಂಪತ್ತೂ ಅಲ್ಲ. ಅದು ಸರ್ಕಾರಿ ಭೂಮಿಯಾದ ಕಾರಣದಿಂದ ಅದರಿಂದ ನನಗೆ ಯಾವುದೇ ಲಾಭವೂ ಇಲ್ಲ. ಇದು ಸರಿಯಲ್ಲವೇ? ಹೌದು, ಇದು ಸರಿಯೆಂದು ಸಹಾಬರು ಹೇಳಿದರು. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಯುವಕರನ್ನು ಅಧಿಕಾರಿಗಳನ್ನಾಗಿ ಮಾಡುತ್ತೇನೆ ಎಂದು ಇವರು ಹೇಳುತ್ತಾರೆ: ಆದರೆ ನಾನು ಸಾತ್ವಿಕರಾದ, ಸದ್ಗುಣಗಳನ್ನು ಹೊಂದಿರುವ ವ್ಯಕ್ತಿಗಳನ್ನು ಮಾತ್ರ ಅಧಿಕಾರಿಗಳನ್ನಾಗಿ ಮಾಡುತ್ತೇನೆ. ಹಝ್ರತ್ ಪೈಗಂಬರ್(ಸ) ಉಸಾಮ ಬಿನ್ ಝೈದ್‌ರನ್ನು ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ್ದಾಗ, ಈಗ ನನ್ನ ಮೇಲೆ ಹೊರಿಸುವುದಕ್ಕಿಂತ ಹೆಚ್ಚು ಆಕ್ಷೇಪಗಳನ್ನು ಅವರ ಮೇಲೆ ಹೊರಿಸಲಾಗಿತ್ತು. ಇದು ಸರಿಯಲ್ಲವೇ? ಸರಿಯೆಂದು ಸಹಾಬರು ಉತ್ತರಿಸಿದರು. ಒಟ್ಟಿನಲ್ಲಿ, ಹಝ್ರತ್ ಉಸ್ಮಾನ್(ರ) ಎಲ್ಲ ಆಕ್ಷೇಪಗಳನ್ನು ಒಂದೊಂದಾಗಿ ಹೇಳುತ್ತಾ ಎಲ್ಲದಕ್ಕೂ ಉತ್ತರಗಳನ್ನು ನೀಡಿದರು.

ಗಲಭೆಗಾರರನ್ನು ವಧಿಸಬೇಕು ಎಂದು ಸಹಾಬರು ನಿರಂತರವಾಗಿ ಒತ್ತಾಯಪಡಿಸುತ್ತಿದ್ದರು. ಆದರೆ ಹಝ್ರತ್ ಉಸ್ಮಾನ್(ರ) ಅವರ ಮಾತನ್ನು ಅಂಗೀಕರಿಸಲಿಲ್ಲ. ಗಲಭೆಗಾರರನ್ನು ಅವರು ಬಿಟ್ಟುಬಿಟ್ಟರು. ಗಲಭೆಕೋರರು ಯಾವೆಲ್ಲ ವಿಧದ ಮೋಸ ಮತ್ತು ವಂಚನೆ ಮಾಡುತ್ತಿದ್ದರು ಎಂದು ಈ ಘಟನೆಯಿಂದ ಗೊತ್ತಾಗುತ್ತದೆ. ಇಂದಿನ ಕಾಲದಲ್ಲಿ ಇರುವಂತಹ ಯಾತ್ರಾ ಸೌಕರ್ಯ ಮತ್ತು ಸಂಪರ್ಕ ಮಾಧ್ಯಮಗಳು ಇಲ್ಲದ ಕಾಲದಲ್ಲಿ, ಅರಿವಿಲ್ಲದ ಜನರನ್ನು ದಾರಿಗೆಡಿಸುವುದು ಬಹಳ ಸುಲಭವಾಗಿತ್ತು. ವಾಸ್ತವದಲ್ಲಿ, ಈ ಜನರ ಬಳಿ ಪಿತೂರಿ ಮಾಡಲು ತಕ್ಕುದಾದ ಯಾವುದೇ ಕಾರಣವಿರಲಿಲ್ಲ. ಸತ್ಯ ಅವರೊಂದಿಗೆ ಇರಲಿಲ್ಲ. ಅವರು ಸತ್ಯದ ಕಡೆಯೂ ಇರಲಿಲ್ಲ. ಅವರು ನಡೆಸಿದ ಎಲ್ಲ ಕುಕೃತ್ಯಗಳೂ ಮಿಥ್ಯ ಮತ್ತು ಸುಳ್ಳಿನ ಆಧಾರದಲ್ಲಾಗಿದ್ದುವು. ಹಝ್ರತ್ ಉಸ್ಮಾನ್(ರ)ರ ಕರುಣೆಯಿಂದ ಮಾತ್ರ ಅವರು ಸುರಕ್ಷಿತರಾಗಿದ್ದರು. ಇಲ್ಲದಿದ್ದರೆ ಮುಸ್ಲಿಮರು ಅವರನ್ನು ತುಂಡರಿಸಿ ಬಿಡುತ್ತಿದ್ದರು. ಈ ಗಲಭೆಕೋರರನ್ನು ಬೇಗನೇ ಶಿಕ್ಷಿಸದಿದ್ದರೆ ಇಸ್ಲಾಮಿನ ಆಡಳಿತ ಬೀಳುವುದು ಎಂದು ಸಹಾಬರಿಗೆ ತೋರುತ್ತಿತ್ತು. ಆದರೆ ಹಝ್ರತ್ ಉಸ್ಮಾನ್(ರ) ಕರುಣೆಯ ಒಂದು ಪೂರ್ಣ ಸ್ವರೂಪವಾಗಿದ್ದರು. ಹೇಗಾದರೂ ಅವರಿಗೆ ಸನ್ಮಾರ್ಗ ಸಿಗಲಿ ಮತ್ತು ಸತ್ಯನಿಷೇಧದೊಂದಿಗೆ ಅವರಿಗೆ ಮರಣ ಬಾರದಿರಲಿ ಎಂದು ಅವರು ಬಯಸಿದ್ದರು. ಹಝ್ರತ್ ಉಸ್ಮಾನ್(ರ)ರ ದಯೆ ಮತ್ತು ಕೃಪೆಯನ್ನು ಅವರು ನೋಡಿದ್ದರು. ಹಝ್ರತ್ ಉಸ್ಮಾನ್‌ರಂತಹ ವ್ಯಕ್ತಿ ಆ ಕಾಲದಲ್ಲಿ ಭೂಮಿಯ ಮೇಲೆ ಇರಲಿಲ್ಲವೆಂದು ಪ್ರತಿಯೊಬ್ಬರ ಮನಸ್ಸು ಸಾಕ್ಷಿ ಹೇಳುತ್ತಿತ್ತು. ಆದರೂ ಅವರು ತಮ್ಮ ಪಾಪಗಳಿಂದ ಪಶ್ಚಾತ್ತಾಪ ಮಾಡುವುದರ ಬದಲಿಗೆ ಕ್ರೋಧ ಮತ್ತು ಕೋಪಾತಿರೇಕದ ಬೆಂಕಿಯಲ್ಲಿ ಇನ್ನೂ ಹೆಚ್ಚಾಗಿ ಉರಿಯುತ್ತಿದ್ದರು. ಸ್ವತಃ ನಿರುತ್ತರರಾಗುವುದನ್ನು ಮತ್ತು ಹಝ್ರತ್ ಉಸ್ಮಾನ್‌ರ ಕ್ಷಮೆ ಹಾಗೂ ಉತ್ತಮ ವರ್ತನೆಯನ್ನು ತಮ್ಮ ನಿಂದನೆಯೆಂದು ಭಾವಿಸುತ್ತಾ ಗಲಭೆಕೋರರು ತಮ್ಮ ಮುಂದಿನ ತಂತ್ರಗಳನ್ನು ಪೂರ್ತಿ ಮಾಡುವ ಯೋಜನೆಯ ಬಗ್ಗೆ ಯೋಚಿಸುತ್ತಾ ಅಲ್ಲಿಂದ ಹೊರಟು ಹೋದರು. ಹಝ್ರತ್ ಉಸ್ಮಾನ್(ರ)ರ ಬಗ್ಗೆಗಿನ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಖುತ್ಬದ ಕೊನೆಯಲ್ಲಿ ಹುಝೂರ್ ದಿವಂಗತರಾದ ಸನ್ಮಾನ್ಯ ಅಬ್ದುಲ್ ಖಾದಿರ್ ಸಾಹಿಬ್ ಬಶೀರ್ ಅಹ್ಮದ್ ಶಹೀದ್, ಸನ್ಮಾನ್ಯ ಅಕ್ಬರ್ ಅಲಿ ಸಾಹಿಬ್, ಸನ್ಮಾನ್ಯ ಖಾಲಿದ್ ಮಹ್ಮೂದುಲ್ ಹಸನ್ ಭಟ್ಟಿ ಸಾಹಿಬ್ ಮತ್ತು ರಬ್ವದ ಸದರ್ ಅಂಜುಮನ್ ಅಹ್ಮದಿಯಾದ ಕಾನೂನು ಸಲಹೆಗಾರರಾದ ಸನ್ಮಾನ್ಯ ಮುಬಾರಕ್ ಅಹ್ಮದ್ ತಾಹಿರ್ ಸಾಹಿಬರ ಬಗ್ಗೆ ಪ್ರಸ್ತಾಪಿಸಿದರು, ಅವರ ಮಗ್ಫಿರತ್‌ಗಾಗಿ ದುಆ ಮಾಡಿದರು. ಜುಮುಅ ನಮಾಝ್ ನಂತರ ಅವರ ಜನಾಝು ಗ್ಹಾಇಬ್ ನಮಾಝ್ ಸಹ ನಿರ್ವಹಿಸಿದರು.)

*****


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 26-02-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon